**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

<u>ಸತ್ರ ಮೊಕದ್ದಮೆ ನಂಃ **95/2024**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಅವಿನಾಶ್ | ಪಿಡಬ್ಲೂ - 03 |
| ತಂದೆಯ ಹೆಸರು | - | ಬಾಲಕೃಷ್ಣ | ಸಿಡಬ್ಲೂ - 06 |
| ವಯಸ್ಸು | - | 31 ವರ್ಷ | |
| ಉದ್ಯೋಗ | - | ಬಾರ್ ನಲ್ಲಿ ಕ್ಯಾಶಿಯರ್ | |
| ವಾಸ ಸ್ಥಳ | - | ಮೂಡಿಗೆರೆ | |

ದಿನಾಂಕಃ 26.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(*ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.*)*

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಫ್ರಾಸಾ.1 ಮತ್ತು ಸಹಪಂಚರಾದ ಚಾಸಾ.5 ರವರು ಗೊತ್ತು.
2. ಫ್ರಾಸಾ.1 ರವರ ತಾಯಿಯ ಕೊಲೆಯಾಗಿದ್ದ ವಿಚಾರಕ್ಕೆ ಸ್ಥಳದಲ್ಲಿ ಮಹಜರನ್ನು ಜರುಗಿಸಲು ದಿನಾಂಕ 10.05.2024 ರಂದು ಚಿಕ್ಕಮಗಳೂರು ಐ ಜಿ ರಸ್ತೆಯಲ್ಲಿರುವ ಸುಪ್ರಿಂ ಮೆಡಿಕಲ್ಸ್ ಹತ್ತಿರ ಬರುವಂತೆ ಫ್ರಾಸಾ.1 ರವರು ನನ್ನನ್ನು ಕರೆದಿದ್ದರು.

3. ಅದರಂತೆ ನಾನು ಅದೇ ದಿನ ಅಂದರೆ ದಿನಾಂಕ 10.05.2024 ರಂದು ಚಿಕ್ಕಮಗಳೂರು ಐ ಜಿ ರಸ್ತೆಯಲ್ಲಿರುವ ಸುಪ್ರಿಂ ಮೆಡಿಕಲ್ಸ್ ಹತ್ತಿರ ಹೋದೆನು. ಅಲ್ಲಿಗೆ ಪೊಲೀಸರು ಬಂದಿದ್ದರು. ಅಲ್ಲಿ ನಾನು, ಫ್ರಾಸಾ.1 ಮತ್ತು ಚಾಸಾ.5 ರವರು ಹಾಜರಿದ್ದೆವು.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ